ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನ.ರಾ.ಚೌಕ, ಬೆಂಗಳೂರು-560002

ದಿನಾಂಕ: 7-8-2017ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ನಿರ್ಣಯ

* * *

ವಿಷಯ ಸಂಖ್ಯೆ: ಸಾನ್ಯಾಸ್ಥಾಸ/ಪಿಆರ್/21/2017-18

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ

ವಿಷಯ: 2017-18ನೇ ಸಾಲಿನ ಕಲ್ಯಾಣ ವಿಭಾಗದ ಅನುಧಾನದ ಹಂಚಿಕೆ ಮತ್ತು ಕ್ರಿಯಾಯೋಜನೆಯ ಅನುಮೋದನೆ ಕುರಿತು.

ಉಲ್ಲೇಖ: 1 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಷ್ಕೃತ ಆಯವ್ಯಯ ಅಂದಾಜುಗಳು 2016-17 ಮತ್ತು ಆಯವ್ಯಯ ಅಂದಾಜುಗಳು 2017-18.

2 ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ವಿಷಯದ ಸಂಖ್ಯೆ:ತೆಆಸ್ಥಾಸ/135/2016-17, ದಿ:22-03-2017.

3 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಯವ್ಯಯ ಸಭೆ ವಿಷಯದ ಸಂಖ್ಯೆ:324/15-16 ದಿನಾಂಕ:05-04-2016 ರಂದು ಅನುಮೋದಿಸಿ ತಿದ್ದುಪಡಿ ಮಾಡಿ ತೀರ್ಮಾನಿಸಿರುವಂತೆ.

4 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:02(356/2016-17)ದಿನಾಂಕ:31-03-2017 ರಂದು ಅನುಮೋದಿಸಿ ತಿದ್ದುಪಡಿ ಮಾಡಿ ತೀರ್ಮಾನಿಸಿರುವಂತೆ.

5 ಸರ್ಕಾರದ ಆದೇಶ ಸಂಖ್ಯೆ:ನ.ಆ.ಇ./294/ಎಂಎನ್‌ಯು/2017, ದಿ:24-05-2017 ರಲ್ಲಿ ಅನುಮೋದಿಸಿರುವಂತೆ.

* * *

1. 2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಪುಸ್ತಕದಲ್ಲಿ ಕಲ್ಯಾಣ ವಿಭಾಗದ ವಿವಿಧ ಲೆಕ್ಕಶೀಷಿಕೆಗಳಲ್ಲಿ ನಿಗದಿಪಡಿಸಿರುವ ಅನುಧಾನಗಳ ವಿವರಗಳು:

ವಿಶೇಷ ಆಯುಕ್ತರು(ಕಲ್ಯಾಣ) ರವರ ಟಿಪ್ಪಣಿ ದಿನಾಂಕ:**29-07-2017**ರಂತೆ ಉಲ್ಲೇಖಿತ ಆದೇಶಗಳನ್ವಯ 2017-18ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವು ಅನುಮೋದನೆಗೊಂಡಿರುತ್ತದೆ. ಸದರಿ ಆಯವ್ಯಯದಲ್ಲಿ (ಅ)ಶೇ.24.10%ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳು (ಆ)ಶೇ 7.25% ರ ಅನುದಾನಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳು (ಇ)ಆರ್ಥಿಕವಾಗಿ ಹಿಂದುಳಿದ ವರ್ಗಗದವರ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳು (ಈ) ಸಾಮಾನ್ಯ ವರ್ಗದ ಅಡಿಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು ಹಾಗೂ ಮಹಿಳಾ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಿಗೆ 2017-18ನೇ ಸಾಲಿನ ಚಾಲ್ತಿ ಅನುದಾನದ ವಿವರಗಳನ್ನು ಅನುಬಂಧ-01ರಲ್ಲಿ ಲಗತ್ತಿಸಿದೆ.

2.ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತಿಮಾರ್ನಕ್ಕಾಗಿ ಸಲ್ಲಿಸಿರುವ ಪ್ರಸ್ತಾವನೆಗಳು:

2.1 2016-17ನೇ ಸಾಲಿನಲ್ಲಿ ಖರ್ಚಾಗದೇ ಉಳಿದಿರುವ ಅರ್ಹ ಚಾಲ್ತಿ ಅನುದಾನವನ್ನು 2017-18ನೇ ಸಾಲಿಗೆ ನಿಯಮಾವಳಿಯಂತೆ ಮುಂದುವರೆಸುವ ಬಗ್ಗೆ :

2.1.1 2016-17ನೇ ಸಾಲಿನ ಅನುಧಾನದ ಹಂಚಿಕೆ ಮತ್ತು ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳ ಕ್ರಿಯಾಯೋಜನೆಗೆ ದಿನಾಂಕ:25-10-2016 ರಂದು ಮಾನ್ಯ ಆಯುಕ್ತರವರ ಅನುಮೋದನೆಯಾಗಿದ್ದು, ಈ ಆಧಾರದ ಮೇಲೆ 2016-17ನೇ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿರುವ ಅನುದಾನಕ್ಕೆ

V. Shanks

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾ...

ಅನುಗುಣವಾಗಿ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹಾಗೂ ಟೆಂಡರ್ ಪ್ರಕ್ರಿಯೆಗಳನ್ನು ಸಿದ್ದತೆ ಮಾಡಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದ್ದು 2016-17ನೇ ಸಾಲಿನ ಆರ್ಥಿಕ ವರ್ಷ ಈಗಾಗಲೇ ಮುಕ್ತಾಯಗೊಂಡಿದ್ದು ಕಾರ್ಯಕ್ರಮಗಳು ಅನುಷ್ಠಾನದ ಹಂತದಲ್ಲಿರುತ್ತದೆ.

2.1.2 ಮೇಲ್ಕಂಡಂತೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮತ್ತು ಮಾನ್ಯ ಆಯುಕ್ತರ ಆದೇಶದಂತೆ 2016-17ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ವಲಯ ಮಟ್ಟದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದ್ದು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಸರಬರಾಜು ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿದೆ. ಅಲ್ಲದೇ ನಿಯಮಾನುಸಾರ ಮಾರ್ಗಸೂಚಿಯನ್ವಯ ಟೆಂಡರ್ ರಹಿತ ಕಾರ್ಯಕ್ರಮಗಳಾದ ಶಾಲಾ/ಕಾಲೇಜು ಶುಲ್ಕಗಳ ಮರುಪಾವತಿ ನೀಡುವ ಕಾರ್ಯಕ್ರಮಗಳಿಗೂ ಸಹಾ ವಲಯ ಮಟ್ಟದಲ್ಲಿ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಸೌಲಭ್ಯಗಳನ್ನು ವಿತರಿಸುವ ಹಂತದಲ್ಲಿರುತ್ತದೆ. ಆದುದರಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು 2016-17ನೇ ಸಾಲಿನ ಕ್ರಿಯಾಯೋಜನೆಯಲ್ಲಿನ ಅವಕಾಶಗಳು, ಕಾರ್ಯಕ್ರಮ /ಅನುದಾನದ ಲಭ್ಯತೆಯ ಮೇರೆಗೆ 2017-18ನೇ ಸಾಲಿಗೆ ಮುಂದುವರೆಸಿಕೊಂಡು, ಸದರಿ ಕಾರ್ಯಕ್ರಮಗಳಿಗೆ 2017-18ನೇ ಸಾಲಿಗೆ 2016-17ನೇ ಸಾಲಿನ ಆಯವ್ಯಯದ ಅನುದಾನದಿಂದ ಮುಂದುವರಿಸಲಾದ ಅರ್ಹ ಉಳಿಕೆ ಅನುದಾನದಲ್ಲಿ ವೆಚ್ಚ ಭರಿಸಲು ಅನಮೋದನೆ ಕೋರಿದೆ.

2.1.3 ಮಂಗಳ ಮುಖಿ/ಟ್ರಾನ್ಸ್‌ಜೆಂಡರ್‌ಗಳಿಗೆ ವೃತ್ತಿ ತರಬೇತಿ ಹಾಗೂ ಆರ್ಥಿಕ ಸಹಾಯ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ-3133 ರ ಅಡಿಯಲ್ಲಿ 2016-17ನೇ ಸಾಲಿನಲ್ಲಿ ರೂ.200.00 ಲಕ್ಷಗಳನ್ನು ನಿಗಧಿಪಡಿಸಲಾಗಿದ್ದು 2016-17ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮ ಅನುಷ್ಠಾನವಾಗದೆ ಇರುವುದರಿಂದ ಮಾನ್ಯ ಆಯುಕ್ತರ ಆದೇಶದಂತೆ 2017-18ನೇ ಸಾಲಿನಲ್ಲಿ ಮುಂದುವರೆಸಿಕೊಂಡು ಅನುಷ್ಠಾನಗೊಳಿಸಲು ಹಾಗೂ ಸದರಿ ಬಿಲ್ಲುಗಳನ್ನು ಪಾವತಿಸಲು ಅನುಮೋದನೆ ಕೋರಿದೆ.

2.2 2017-18 ನೇ ಸಾಲಿನ ಅಯವ್ಯಯದ ಚಾಲ್ತಿ ಅನುಧಾನಗಳಿಗೆ ಸಂಬಂಧಿಸಿದಂತೆ:

2.2.1 ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/32/ಪಿಎನ್‌ಜಿ/2015 ದಿನಾಂಕ:30-07-2015 ರಲ್ಲಿ ಶೇ.24.10%ರ ಅನುದಾನವನ್ನು ಪರಿಶಿಷ್ಟ ಜಾತಿಯವರಿಗೆ ಶೇ.17.15%ರಷ್ಟು ಹಾಗೂ ಪರಿಶಿಷ್ಟ ಪಂಗಡದವರಿಗೆ ಶೇ.6.95% ರಂತೆ ಹಂಚಿಕೆ ಮಾಡಲು ಸೂಚಿಸಿದ್ದು, ಅದರಂತೆ 2017-18ನೇ ಸಾಲಿನ ಕಲ್ಯಾಣಕಾರ್ಯಕ್ರಮ/ಕಾಮಗಾರಿ ಯೋಜನೆಗಳಿಗೆ ನಿಗಧಿಪಡಿಸಿರುವ ಅನುದಾನವನ್ನು ಹಂಚಿಕೆ ಮಾಡಲು ಅನುಮೋದನೆ ಕೋರಿದೆ

2.2.2 ಈ ಹಿಂದಿನ ಸಾಲುಗಳಲ್ಲಿ ಶೇ.24.10%ರ ಅನುದಾನವನ್ನು ಆಯಾ ವಾರ್ಡ್‌ಗಳಲ್ಲಿ ವಾಸವಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಅನುಗುಣವಾಗಿ ಹಂಚಿಕೆ ಮಾಡಲಾಗಿರುತ್ತದೆ. ಅದರಂತೆ 2017-18ನೇ ಸಾಲಿನಲ್ಲಿಯೂ ಸಹ ಶೇ.24.10%ರಡಿ ವಿವಿಧ ಲೆಕ್ಕಶೀರ್ಷಿಕೆಯಡಿ ಕಾಯ್ದಿರಿಸಿರುವ ಅನುದಾನವನ್ನು ಪಾಲಿಕೆ ವ್ಯಾಪ್ತಿಯ ಎಲ್ಲಾ ಎಂಟು ವಲಯಗಳ 198 ವಾರ್ಡ್‌ಗಳಲ್ಲಿ ವಾಸವಾಗಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಹಂಚಿಕೆ ಮಾಡಲು ಅನುಮೋದನೆ ಕೋರಿದೆ.

2.2.3 ಗ್ರಾಮೀಣ ಅಭಿವೃದ್ದಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 2011ರ SECC ಜನಗಣತಿಯ ವರದಿಯನ್ನು 2015 ನೇ ಸಾಲಿನಲ್ಲಿ ಲೋಕಾರ್ಪಣೆ ಮಾಡಲಾಗಿದ್ದು, ಸದರಿ ವರದಿಯನ್ವಯ ಪಾಲಿಕೆಯ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜನಸಂಖ್ಯೆಯ ಅನುಗುಣವಾಗಿ 2017-18ನೇ ಸಾಲಿನ ಶೇ.24.10%ರ ಅನುಧಾನದಡಿಯಲ್ಲಿ (ಅ)ಕಲ್ಯಾಣ ಕಾರ್ಯಕ್ರಮಗಳು (ಆ)ವಸತಿ (ಇ) ಮೂಲಭೂತ ಸೌಕರ್ಯಗಳ ಕಾಮಗಾರಿಗಳಿಗೆ ಚಾಲ್ತಿ ಅನುದಾನವನ್ನು ವಲಯವಾರು ಹಂಚಿಕೆ ಮಾಡಿರುವ ವಿವರವನ್ನು ಅನುಬಂಧ-02 ರಲ್ಲಿ ಲಗತ್ತಿಸಿದ್ದು ಅನುಮೋದನೆ ಕೋರಿದೆ.

V. Jhansi
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

2.2.4 ಪಿ-ಕೋಡ್:2021 ರಲ್ಲಿ ರೂ.10000.00 ಲಕ್ಷಗಳ ಚಾಲ್ತಿ ಅನುದಾನವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ವ್ಯಕ್ತಿಗತ ಸೌಲಭ್ಯಗಳ ಕಾಮಗಾರಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಲಾಗಿರುತ್ತದೆ. ಪಿ-ಕೋಡ್:2340 ರಲ್ಲಿ ರೂ.10000.00 ಲಕ್ಷಗಳ ಚಾಲ್ತಿ ಅನುದಾನವನ್ನು ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಮನೆಗಳ ನಿರ್ಮಾಣಕ್ಕಾಗಿ ನಿಗಧಿಪಡಿಸಲಾಗಿರುತ್ತದೆ. ಪಿ-ಕೋಡ್:3314 ರಲ್ಲಿ ರೂ.1000.00 ಲಕ್ಷಗಳ ಚಾಲ್ತಿ ಅನುದಾನವನ್ನು ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ವೈಯುಕ್ತಿಕ ಮನೆ ನಿರ್ಮಾಣಕ್ಕಾಗಿ ನಿಗಧಿಪಡಿಸಲಾಗಿರುತ್ತದೆ. ಪಿ-ಕೋಡ್:3286 ರಲ್ಲಿ ರೂ.2000.00 ಚಾಲ್ತಿ ಅನುದಾನವನ್ನು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಒಂಟಿ ಮನೆ ನಿರ್ಮಾಣಕ್ಕಾಗಿ ನಿಗಧಿಪಡಿಸಲಾಗಿರುತ್ತದೆ. ಹಾಗೂ 2017-18ನೇ ಸಾಲಿನ ಆಯವ್ಯಯ ಅಂದಾಜು ಪುಸ್ತಕದಲ್ಲಿ ಪ್ರತಿ ಮನೆಗೆ ರೂ.4.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಆದ್ದರಿಂದ ಈ ಮೇಲಿನ ಎಲ್ಲಾ ಅನುದಾನಗಳನ್ನು ಹಂಚಿಕೆ ಮಾಡಲು ಸಮಿತಿಯ ಅನುಮೋದನೆ ಕೋರಿದೆ.

2.2.5 ಪಿ-ಕೋಡ್:2020 ರ ಅಡಿಯಲ್ಲಿ ರೂ. 1000.00 ಲಕ್ಷಗಳ ಚಾಲ್ತಿ ಅನುದಾನವನ್ನು ವ್ಯಕ್ತಿಗತ ಸೌಲಭ್ಯಗಳಿಗೆ ಸಹಾಯಧನ ನೀಡುವ ಕಾರ್ಯಕ್ರಮಕ್ಕೆ ನಿಗಧಿಪಡಿಸಲಾಗಿದೆ. ಪಿ-ಕೋಡ್:2022 ರ ಅಡಿಯಲ್ಲಿ ರೂ. 1000.00 ಲಕ್ಷಗಳ ಚಾಲ್ತಿ ಅನುದಾನವನ್ನು ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ನಿಗಧಿಪಡಿಸಲಾಗಿದೆ ಮತ್ತು ಪಿ-ಕೋಡ್:2023 ರ ಅಡಿಯಲ್ಲಿ ರೂ. 1200.00 ಲಕ್ಷಗಳ ಚಾಲ್ತಿ ಅನುದಾನವನ್ನು ಇತರೆ ಕಾರ್ಯಕ್ರಮಗಳು (ವ್ಯಕ್ತಿಗತ ಮತ್ತು ಸಮುದಾಯ) ಕಾರ್ಯಕ್ರಮಕ್ಕೆ ನಿಗಧಿಪಡಿಸಲಾಗಿದೆ. ಈ ಎಲ್ಲಾ ಲೆಕ್ಕಶೀರ್ಷಿಕೆಗಳನ್ನು **ವಿಲೀನಗೊಳಿಸಿ** ಲೆಕ್ಕಶಿರ್ಷಿಕೆ ಪಿ-ಕೋಡ್:2020 ರ ಅಡಿಯಲ್ಲಿ **ಒಟ್ಟು ರೂ. 3200.00 ಲಕ್ಷಗಳನ್ನು ವ್ಯಕ್ತಿಗತ ಸೌಲಭ್ಯಗಳಿಗೆ** ಸಹಾಯಧನ ನೀಡುವ ಕಾರ್ಯಕ್ರಮಕ್ಕೆ ನಿಗಧಿಪಡಿಸಲು ಹಾಗೂ ವಲಯವಾರು ಹಂಚಿಕೆ ಮಾಡಲು ಅನುಮೋದನೆ ಕೋರಿದೆ.

2.2.6 ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಸುತ್ತೋಲೆ ಸಂಖ್ಯೆ:ನಅಇ 32 ಪಿಎನ್‌ಜಿ 2015, ದಿನಾಂಕ:30-07-2015 ರಲ್ಲಿ ಸೂಚಿಸಿರುವಂತೆ ಪೌರಕಾರ್ಮಿಕರು ಮತ್ತು ಇತರೆ ಗ್ರೂಪ್ ಡಿ ವೃಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಿಬ್ಬಂದಿಗಳಿಗೆ ಶೇ.5% ರಷ್ಟನ್ನು ಮೀಸಲಿರಿಸುವ ಬಗ್ಗೆ.

ಅ) ಕಲ್ಯಾಣ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆ ಪಿ-0224ರ ಅಡಿಯಲ್ಲಿ ರೂ.500.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಪೌರಕಾರ್ಮಿಕರು, ಗ್ಯಾಂಗ್‌ಮೆನ್‌ಗಳು ಮತ್ತು ತೋಟಗಾರಿಕೆ ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ಕಾರ್ಯಕ್ರಮವನ್ನು ಈ ಕೆಳಕಂಡಂತೆ ಭಾಗಶ: ಮಾರ್ಪಾಡು ಮಾಡಲಾಗಿರುತ್ತದೆ.

(1) ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ 'ಡಿ' ನೌಕರರು, ಗ್ಯಾಂಗ್‌ಮೆನ್ ಮತ್ತು ತೋಟಗಾರಿಕೆ ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ಮತ್ತು ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ ನೀಡುವುದು.

ಆ)ಕಲ್ಯಾಣ ಕಾರ್ಯಕ್ರಮಗಳ ಲೆಕ್ಕಶೀರ್ಷಿಕೆ ಪಿ-3313ರ ಅಡಿಯಲ್ಲಿ ರೂ.2400.00ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಪೌರಕಾರ್ಮಿಕರು (ಖಾಯಂ ಹಾಗೂ ಹೊರಗುತ್ತಿಗೆ ನೌಕರರು) ಹಾಗೂ 'ಡಿ' ಗ್ರೂಪ್ ನೌಕರರಿಗೆ ಸಹಾಯಧನ ನೀಡುವ ಕಾರ್ಯಕ್ರಮವನ್ನು ಈ ಕೆಳಕಂಡಂತೆ ಭಾಗಶ: ಮಾರ್ಪಾಡು ಮಾಡಲಾಗಿದೆ.

(1) ಪಾಲಿಕೆಯ ಖಾಯಂ ಪೌರಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಮತ್ತು ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ ಹಾಗೂ ಎಲ್ಲಾ ವ್ಯಕ್ತಿಗತ ಕಲ್ಯಾಣ ಕಾರ್ಯಕ್ರಮಗಳ ಸೌಲಭ್ಯ ನೀಡಲು.

(2) ಪಾಲಿಕೆಯ ಗುತ್ತಿಗೆ ಪೌರಕಾರ್ಮಿಕರಿಗೆ ಎಲ್ಲಾ ವ್ಯಕ್ತಿಗತ ಕಲ್ಯಾಣ ಕಾರ್ಯಕ್ರಮಗಳ ಸೌಲಭ್ಯ ನೀಡುವುದು

(3) ಸಫಾಯಿ ಕರ್ಮಚಾರಿಗಳಿಗೆ ಎಲ್ಲಾ ವ್ಯಕ್ತಿಗತ ಕಲ್ಯಾಣ ಕಾರ್ಯಕ್ರಮಗಳ ಸೌಲಭ್ಯ ನೀಡುವುದು

V. S. Ghule

3

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(4) ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ರವರಿಗೆ ಎಲ್ಲಾ ವ್ಯಕ್ತಿಗತ ಕಲ್ಯಾಣ ಕಾರ್ಯಕ್ರಮಗಳ ಸೌಲಭ್ಯ ನೀಡುವುದು

(5) ಒಳಚರಂಡಿ ಸ್ವಚ್ಛಗೊಳಿಸುವಾಗ ಅಪಘಾತದಿಂದ ವ್ಯಕ್ತಿಗಳು ಮರಣಹೊಂದಿದ್ದಲ್ಲಿ ಸರ್ಕಾರ ನಿಗಧಿಪಡಿಸಿರುವ ಪರಿಹಾರ ಮೊತ್ತವನ್ನು ಭರಿಸುವುದು. ಈ ಕಾರ್ಯಕ್ರಮಗಳಿಗೆ ಅನುಮೋದನೆ ಕೋರಿದೆ.

<u>ಕಂಡಿಕೆ 2.2.6 ರ (ಅ) ಮತ್ತು (ಆ) ಗಳಲ್ಲಿ ಸೂಚಿಸಿರುವ ಮಾರ್ಪಾಟುಗಳಿಗೆ ಅನುಮೋದನೆ ನೀಡಲು ಕೋರಿದೆ.</u>

2.2.7 2017-18ನೇ ಸಾಲಿನ ಆಯವ್ಯಯದಲ್ಲಿ (ಅ) ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರ ಕಲ್ಯಾಣ /ಕಾಮಗಾರಿ ಕಾರ್ಯಕ್ರಮಗಳು (ಆ)ಆರ್ಥಿಕವಾಗಿ ಹಿಂದುಳಿದ ವರ್ಗಗದವರ ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳು (ಇ)ಸಾಮಾನ್ಯ ವರ್ಗದ ಅಡಿಯಲ್ಲಿ ಹಿರಿಯ ನಾಗರಿಕರು, ಅಂಗವಿಕಲರು, ಮಹಿಳಾ ವರ್ಗದವರ ಕಲ್ಯಾಣ ಕಾರ್ಯಕ್ರಮಗಳಿಗೆ ಚಾಲ್ತಿ ಅನುದಾನವನ್ನು ಒಟ್ಟು 198 ವಾರ್ಡ್‌ಗಳಿಗೆ ವಾರ್ಡ್‌ವಾರು ಸಮಾನಾಂತರವಾಗಿ ಹಂಚಿಕೆ ಮಾಡಲು ಅನುಮೋದನೆ ಕೋರಿದೆ. (ವಿವರವನ್ನು ಅನುಬಂಧ-03ರಲ್ಲಿ ಲಗತ್ತಿಸಿದೆ).

2.2.8 <u>ರಾತ್ರಿ ತಂಗುದಾಣಗಳ ನಿರ್ಮಾಣ ಕಾರ್ಯಕ್ರಮ</u> ಲೆಕ್ಕ ಶೀರ್ಷಿಕೆ-2583 ರ ಅಡಿಯಲ್ಲಿ ರೂ.200.00 ಲಕ್ಷಗಳನ್ನು ನಿಗಧಿಪಡಿಸಿರುವುದರಿಂದ ಎಲ್ಲಾ 8 ವಲಯಗಳಿಗೆ ಸಮನಾಂತರವಾಗಿ ಪ್ರತಿ ವಲಯಕ್ಕೆ ರೂ.25.00 ಲಕ್ಷಗಳಂತೆ ಹಂಚಿಕೆ ಮಾಡಲು ಅನುಮೋದನೆ ಕೋರಿದೆ.

2.2.9 <u>ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯುಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತ:</u>

ಈ ಮೇಲ್ಕಂಡ ಯೋಜನೆಯು "ನಗರ ಪ್ರದೇಶದಲ್ಲಿನ ಕಡು ಬಡವರಿಗೆ ಮೂಲಭೂತ ಸೌಕರ್ಯಗಳು" ಕಾರ್ಯಕ್ರಮವನ್ನು ಈ ಹಿಂದಿನ ಸಾಲಿನ ಆಯವ್ಯಯ ಪುಸ್ತಕಗಳಲ್ಲಿ ಜೆ.ಎನ್.ಎನ್.ಯು.ಆರ್.ಎಂ. ಕಾಮಗಾರಿಗಳ ವಿಭಾಗದಲ್ಲಿ ನಮೂದಿಸಲಾಗಿತ್ತು. ಆದರೆ 2017-18ನೇ ಸಾಲಿನ ಆಯವ್ಯಯ ಪುಸ್ತಕದಲ್ಲಿ ಹೊಸದಾಗಿ ಸೇರಿಸಿರುವ ಪಿ-ಕೋಡ್:3149 ರಲ್ಲಿ ರೂ.1000.00 ಲಕ್ಷಗಳ ಅನುದಾನವನ್ನು ಪಾಲಿಕೆ ವತಿಯಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ವೈಯುಕ್ತಿಕ ಮನೆ ನಿರ್ಮಾಣಕ್ಕಾಗಿ ಹೊಂದಾಣಿಕೆ ಮೊತ್ತದ ಅನುದಾನವನ್ನು ಕಲ್ಯಾಣ ಕಾರ್ಯಕ್ರಮದ ಅಡಿಯಲ್ಲಿ ನಮೂದಿಸಿರುವದರಿಂದ ಸದರಿ ಕಾರ್ಯಕ್ರಮವನ್ನು ಜೆ.ಎನ್.ಎನ್.ಯು.ಆರ್.ಎಂ. ನಿಯಮಾನುಸಾರ ಈ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ರೂಪುರೇಷೆ ಹಾಗೂ ಮಾರ್ಗಸೂಚಿಗಳನ್ನು ಸಿದ್ದಪಡಿಸಲು ಮತ್ತು ಅನುದಾನ ಹಂಚಿಕೆ ಹಾಗೂ ಕಾರ್ಯಕ್ರಮದ ಅನುಷ್ಟಾನದ ಬಗ್ಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಬಿಎಸ್‌ಯುಪಿ/ಕಾಮಗಾರಿ ವಿಭಾಗದವರು ಪ್ರಧಾನ ಅಭಿಯಂತರರು ಮತ್ತು ವಿಶೇಷ ಆಯುಕ್ತರು (ಯೋಜನೆ) ರವರ ಮುಖಾಂತರ ಅನುಷ್ಠಾನಗೊಳಿಸಲು ಅನುಮೋದನೆ ಕೋರಿದೆ.

2.2.10 2017-18ನೇ ಸಾಲಿನ ಆಯವ್ಯಯದಲ್ಲಿನ ಲೆಕ್ಕ ಶೀರ್ಷಿಕೆ ಪಿ-ಕೋಡ್:1878, ಪಿ-ಕೋಡ್:2021, ಪಿ-ಕೋಡ್:3149, ಪಿ-ಕೋಡ್:2340, ಪಿ-ಕೋಡ್:3314, ಪಿ-ಕೋಡ್:3286, ಪಿ-ಕೋಡ್:3288 ಗಳ ಅಡಿಯಲ್ಲಿ ನಿಗಧಿಪಡಿಸಿರುವ ಚಾಲ್ತಿ ಅನುದಾನಕ್ಕೆ ಸಂಬಂಧಿಸಿದಂತೆ ವಿಶೇಷ ಆಯುಕ್ತರು (ಯೋಜನೆ) ರವರು ಪ್ರಧಾನ ಅಭಿಯಂತರರು ಕಾಮಗಾರಿ ವಿಭಾಗದಿಂದ ವಾರ್ಡ್‌ವಾರು ಪ್ರಸ್ತಾವನೆಗಳನ್ನು ಒಳಗೊಂಡ ವಲಯವಾರು ಕಾಮಗಾರಿ ಕ್ರಿಯಾಯೋಜನೆಯನ್ನು ಸಿದ್ದಪಡಿಸಿ, ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು, ಸಾ.ನ್ಯಾ.ಸ್ಥಾ.ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.

<u>3. 2017-18ನೇ ಸಾಲಿನ ಕ್ರಿಯಾಯೋಜನೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ</u>

3.1 ಈ ಮೇಲ್ಕಂಡಂತೆ 2017-18ನೇ ಸಾಲಿನ ಆಯವ್ಯಯದ ಅಂದಾಜಿನಲ್ಲಿ ಚಾಲ್ತಿ ಕಲ್ಯಾಣ ಕಾರ್ಯಕ್ರಮಗಳ ವಿವಿಧ ಲೆಕ್ಕಶೀರ್ಷಿಕೆಯಡಿ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ವಲಯ ಮಟ್ಟದಲ್ಲಿ ಕಾರ್ಯಕ್ರಮಗಳಿಗೆ ವಾರ್ಡ್‌ವಾರು ಆರ್ಥಿಕ ಮತ್ತು ಭೌತಿಕ ಗುರಿಯನ್ನು ನಿಗಧಿಪಡಿಸಿಕೊಂಡು

ಅಧ್ಯಕ್ಷರು
...ಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪಾಲಿಕೆಯಲ್ಲಿ ಜಾರಿಯಲ್ಲಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಸಕ್ಷಮಪ್ರಾಧಿಕಾರದಿಂದ ಕ್ರಿಯಾಯೋಜನೆಗೆ ಅನುಮೋದನೆ ಪಡೆಯುವುದು.

3.2 2017–18ನೇ ಸಾಲಿನ ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಸಾರ್ವಜನಿಕ ಪತ್ರಿಕಾ ಪ್ರಕಟಣೆ ಮುಖಾಂತರ ಅರ್ಜಿ ಆಹ್ವಾನಿಸಿ ಅರ್ಜಿಗಳನ್ನು ವಿತರಿಸುವುದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ, ವಿವಿಧ ಯೋಜನೆಗಳಿಗೆ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದು ಇತ್ಯಾದಿ ಕ್ರಮಗಳನ್ನು ನಿಯಮಾನುಸಾರ ಪೂರ್ಣಗೊಳಿಸಿ ಪ್ರಸ್ತಾವನೆಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಪ್ರಸಕ್ತ ಸಾಲಿನ ಆರ್ಥಿಕ ವರ್ಷದ ಒಳಗಾಗಿ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿಯಮಾನುಸಾರ ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು ಕ್ರಮ ಕೈಗೊಳ್ಳುವುದು.

3.3 2017–18ನೇ ಸಾಲಿನ ಚಾಲ್ತಿ ಆಯವ್ಯಯದಲ್ಲಿನ ಅವಕಾಶಗಳ ಬಗ್ಗೆ ಪರಿಶೀಲಿಸಿ 2017–18ನೇ ಸಾಲಿಗೆ ತೆಗೆದುಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಮಾನ್ಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ನಿರ್ದೇಶನ/ಅನುಮೋದನೆ ನೀಡಲು ಕೋರಲಾಗಿದೆ.

(ಅ) ಈ ನಿಟ್ಟಿನಲ್ಲಿ ಅಳವಡಿಸಿಕೊಳ್ಳಬಹುದಾದ ನಗರಾಢಳಿತ ಇಲಾಖೆ ರವರ ಸುತ್ತೋಲೆ (1)ಸಂಖ್ಯೆ:ನಅಇ/37/ಪಿಎನ್‌ಜಿ/2015, ದಿನಾಂಕ:30/07/2015, (2)ಸಂಖ್ಯೆ:ನಅಇ/43/ಪಿಎನ್‌ಜಿ/2015, ದಿನಾಂಕ:29/03/2016, (3)ಸಂಖ್ಯೆ:ನಅಇ/39/ಪಿಎನ್‌ಜಿ/2015 ದಿನಾಂಕ: 09/10/2015 (ಪ್ರತಿಗಳನ್ನು ಲಗತ್ತಿಸಿದೆ) ರಲ್ಲಿ ಲಭ್ಯವಿರುವ ವಿವಿಧ ಕಲ್ಯಾಣ ಕಾರ್ಯಕ್ರಮ/ಕಾಮಗಾರಿ ಯೋಜನೆಗಳು ಹಾಗೂ ಮಾರ್ಗಸೂಚಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಅನುಮೋದನೆ ಕೋರಿದೆ.

(ಆ) ಸರ್ಕಾರದ ನಗರಾಡಳಿತ ಇಲಾಖೆಯಲ್ಲಿ ಲಭ್ಯವಿಲ್ಲದೇ ಪಾಲಿಕೆಯ ವ್ಯಾಪ್ತಿಯಲ್ಲಿ ಹೆಚ್ಚಿನ ಬೇಡಿಕೆ ಇರುವ ಕೆಲವು ಕಲ್ಯಾಣ/ಕಾಮಗಾರಿ ಕಾರ್ಯಕ್ರಮಗಳನ್ನು ಅನುಷ್ಠನಗೊಳಿಸಲು ಹಾಗೂ ಸದರಿ ಯೋಜನೆಗಳಿಗೆ ಈಗಾಗಲೇ ಹಿಂದಿನ ಸಾಲುಗಳಲ್ಲಿ ಪಾಲಿಕೆಯಿಂದ ಹೊರಡಿಸಿರುವ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಅನುಮೋದನೆ ಕೋರಿದೆ.

3.4 ಪಾಲಿಕೆಯ ನೈರ್ಮಲ್ಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ, ಇತರೆ ಬಡಜನರು, ವಿಕಲಚೇತನರು ಪೌರಕಾರ್ಮಿಕರು, ಸಫಾಯಿ ಕರ್ಮಚಾರಿಗಳು/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಗಳಿಗೆ ಹಾಗೂ ಖಾಯಂ ಹಾಗೂ ಹೊರಗುತ್ತಿಗೆ ಮೇರೆಗೆ ಕಾರ್ಯನಿರ್ವಹಿಸುವವರಿಗೆ ಆದ್ಯತೆ ನೀಡುವುದು.

3.5 ವಿವಿಧ ಲೆಕ್ಕ ಶೀರ್ಷಿಕೆಗಳಡಿ ನಿಗಧಿಪಡಿಸಿರುವ ಅನುಧಾನವನ್ನು ಅದೇ ಉದ್ದೇಶಗಳಿಗೆ ವೆಚ್ಚಮಾಡತಕ್ಕದ್ದು, ಒಂದು ವೇಳೆ ಅನುಧಾನದ ಮರುಹೊಂದಾಣಿಕೆ ಮಾಡಿಕೊಳ್ಳಬೇಕಾದ್ದಲ್ಲಿ, ಒಂದೇ ಲೆಕ್ಕಶಿರ್ಷಿಕೆಯಡಿಯಲ್ಲಿ ಬರುವಂತಹ ವಿವಿಧ ಕಾರ್ಯಕ್ರಮಗಳ ಪೈಕಿ, ಯಾವುದಾದರು ಕಾರ್ಯಕ್ರಮಕ್ಕೆ ಮೀಸಲಿಟ್ಟಿರುವ ಅನುದಾನ ಬಳಕೆಯಾಗದೆ ಉಳಿಕೆಯಾದ ಪಕ್ಷದಲ್ಲಿ, ಅಂತಹ ಅನುದಾನವನ್ನು ಸದರಿ ಲೆಕ್ಕಶೀರ್ಷಿಕೆಯಡಿ ಬರುವಂತಹ ಯಾವುದಾದರೂ ಹೆಚ್ಚು ಬೇಡಿಕೆಯಿರುವ ಕಾರ್ಯಕ್ರಮಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳವ ಪ್ರಸ್ತಾವನೆಗೆ ಮಾನ್ಯ ಆಯುಕ್ತರು ಅನುಮೋದನೆ ನೀಡುವ ಬಗ್ಗೆ.

3.6 ಒಂದು ಲೆಕ್ಕಶೀರ್ಷಿಕೆಯಿಂದ ಇನ್ನೊಂದು ಲೆಕ್ಕಶಿರ್ಷಿಕೆಯಲ್ಲಿನ ಕಲ್ಯಾಣ ಕಾರ್ಯಕ್ರಮ/ಯೋಜನೆಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳುವ ಸಂದರ್ಭ ಬಂದಲ್ಲಿ ಮಾತ್ರ ಅಂತಹ ಮರು ಹೊಂದಾಣಿಕೆಗೆ ಪ್ರಸ್ತಾವನೆಗಳನ್ನು ಮಾನ್ಯ ಆಯುಕ್ತರ ಅನುಮೋದನೆಯೊಂದಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳಿಗೆ ಅನುಮೋದನೆ ಪಡೆದು, ಅನುಷ್ಠಾನಗೊಳಿಸಲು ಕ್ರಮವಹಿಸುವುದು.

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

3.7 ಕಲ್ಯಾಣ ಕಾರ್ಯಕ್ರಮಗಳನ್ನು ಶೀಘ್ರ ಅನುಷ್ಠಾನಗೊಳಿಸುವ ಉದ್ದೇಶದಿಂದ ಟೆಂಡರ್ ರಹಿತ ಕಲ್ಯಾಣ ಕಾರ್ಯಕ್ರಮಗಳನ್ನು ಮಾರ್ಗಸೂಚಿಯನ್ವಯ ನಿಯಮಾಸಾರ ಹಾಗೂ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಅನುಷ್ಠಾನಾಧಿಕಾರಿಗಳು ವಲಯ ಮಟ್ಟದಲ್ಲಿ ಕ್ರಮವಹಿಸುವುದು.

3.8 ಕಲ್ಯಾಣ ಕಾರ್ಯಕ್ರಮಗಳನ್ನು ಶೀಘ್ರಗತಿಯಲ್ಲಿ ಅನುಷ್ಠಾನಗೊಳಿಸಲು ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುಗಳನ್ನು ಅನುಷ್ಠಾನಾಧಿಕಾರಿಗಳಾಗಿ ಹಾಗೂ ಉಪ ಆಯುಕ್ತರುಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸುವುದು.

3.9 ಕಾಮಗಾರಿ ಕಾರ್ಯಕ್ರಮಗಳ ಅಡಿಯಲ್ಲಿ ಅನುದಾನದಡಿಯಲ್ಲಿನ ಮನೆ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುಗಳನ್ನು ಅನುಷ್ಠಾನಾಧಿಕಾರಿಗಳಾಗಿ ಹಾಗೂ ಎಲ್ಲಾ ವಲಯಗಳ ಮುಖ್ಯ ಅಭಿಯಂತರರನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸುವ ಬಗ್ಗೆ ಮತ್ತು ಎಲ್ಲಾ ರೀತಿಯ ಕಾಮಗಾರಿ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಕಛೇರಿಯಲ್ಲಿ ಪ್ರಧಾನ ಅಭಿಯಂತರರು ಸಮುಚ್ಛಯ ಮಾರ್ಗದಲ್ಲಿ ಎಲ್ಲಾ ರೀತಿಯ ಕ್ರಮ ವಹಿಸುವುದು.

3.10 ಪ್ರತಿ ತಿಂಗಳು ವಲಯವಾರು ಪ್ರಗತಿಯ ವರದಿ/ಮಾಹಿತಿಯನ್ನು ನಿಗಧಿತ ನಮೂನೆಗಳಲ್ಲಿ ವಾರ್ಡ್ ಮತ್ತು ವಲಯವಾರು ಎಲ್ಲಾ ಕಲ್ಯಾಣ ಕಾರ್ಯಕ್ರಮಗಳ ಮತ್ತು ಕಾಮಗಾರಿಗಳ ಒಟ್ಟಾರೆ ಪ್ರಗತಿಯ ವರದಿಯನ್ನು ಕ್ರೋಢೀಕರಿಸಿ ತಪ್ಪದೇ ಕೇಂದ್ರ ಕಛೇರಿಗೆ ಸಲ್ಲಿಸುವುದು ಹಾಗೂ ಪ್ರತಿ ಸಭೆಗೆ ಅಗತ್ಯ ಮಾಹಿತಿಯೊಂದಿಗೆ ಹಾಜರಾಗಲು ಅಪರ/ಜಂಟಿ ಆಯುಕ್ತರು, ಉಪ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಸಹಾಯಕ ಕಲ್ಯಾಣಾಧಿಕಾರಿಗಳಿಗೆ ಹಾಜರಾಗಲು ಸೂಚಿಸಿದೆ.

3.11 ತತ್ಸಂಬಂಧವಾಗಿ ಮೇಲೆ ವಿವರಿಸಲಾದ ಕಂಡಿಕೆ ಸಂಖ್ಯೆ (2) & (3) ರ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ,

(1) (ಅ)2017-18ನೇ ಸಾಲಿನ ಶೇ.24.10% ರ ಅನುದಾನದಡಿಯ ಪ.ಜಾ/ಪ.ಪಂ ಕಲ್ಯಾಣ ಕಾರ್ಯಕ್ರಮಗಳು/ ಕಾಮಗಾರಿಗಳು/ವಸತಿ ನಿರ್ಮಾಣ, (ಆ) ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವರ್ಗದ ಕಲ್ಯಾಣ ಕಾರ್ಯಕ್ರಮಗಳು/ವಸತಿ ನಿರ್ಮಾಣ/ಕಾಮಗಾರಿಗಳು (ಇ) ಮಹಿಳಾ ಕಲ್ಯಾಣ ಕಾರ್ಯಕ್ರಮಗಳು (ಈ) ವಿಕಲಚೇತನರು, (ಉ) ಸಾಮಾನ್ಯ ವರ್ಗದವರ ಅನುಧಾನದಡಿ ಅನುಷ್ಠಾನಗೊಳಿಸಬೇಕಾದ ಕಲ್ಯಾಣ ಕಾರ್ಯಕ್ರಮಗಳ ಹಾಗೂ ಕಾಮಗಾರಿಗಳ ಅನುದಾನದ ಹಂಚಿಕೆ ಹಾಗೂ ಕ್ರಿಯಾಯೋಜನೆಯನ್ನು ಅನುಮೋದಿಸಲು ಕೋರಿದೆ.

ಮತ್ತು

(2) ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಹಮ್ಮಿಕೊಳ್ಳಬೇಕಾದ ಕಲ್ಯಾಣ\ಕಾಮಗಾರಿ ಯೋಜನೆಗಳನ್ನು ಸ್ಥಾಯಿ ಸಮಿತಿಯ ವತಿಯಿಂದ ಸೂಚಿಸಲು ಕೋರಿ ಟಿಪ್ಪಣಿಯನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

ತೀರ್ಮಾನ:

1. ಅಪರ ಆಯುಕ್ತರು(ಕಲ್ಯಾಣ)ರವರ ದಿನಾಂಕ:29-07-2017ರ ಟಿಪ್ಪಣಿಯನ್ನು ಸುದೀರ್ಘವಾಗಿ ಪರಿಶೀಲಿಸಿ, ಚರ್ಚಿಸಿದ ನಂತರ ಟಿಪ್ಪಣಿಯಲ್ಲಿನ ಪ್ರಸ್ತಾವನೆಗಳನ್ನು ಭಾಗಶ: ಒಪ್ಪುತ್ತ ಈ ಕೆಳಕಂಡ ಮಾರ್ಪಾಡುಗಳೊಂದಿಗೆ 2017-18ನೇ ಸಾಲಿನ ಆಯವ್ಯಯದ ಅನುದಾನದ ಹಂಚಿಕೆ ಮತ್ತು ಕ್ರಿಯಾ ಯೋಜನೆಯನ್ನು ಅನುಮೋದಿಸಲು ಸಮಿತಿಯು ಸರ್ವಾನುಮತಿಯಿಂದ ತೀರ್ಮಾನಿಸಿದೆ.

2. 2017-18ನೇ ಸಾಲಿನ ಕಲ್ಯಾಣ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆಯಡಿಯಲ್ಲಿ ಲಭ್ಯವಿರುವ ಚಾಲ್ತಿ ಅನುದಾನದ ವಿವರಗಳನ್ನು ಅನುಬಂದ (1) ರಲ್ಲಿ ಲಗತ್ತಿಸಲಾಗಿದೆ.

V. Srinivas
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

3. 2017-18ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳಿಗೆ ಅನುಮೋದಿತ ಆಯವ್ಯಯ ಅಂದಾಜುಗಳಿಗೆ ಸಂಬಂಧಿತ ಕ್ರಿಯಾ ಯೋಜನೆಯಲ್ಲಿ ನಿಗಧಿ ಪಡಿಸಿರುವ ವ್ಯಕ್ತಿಗತ ಸೌಲಭ್ಯಗಳಿಗೆ ಸಹಾಯಧನ :

(1) ಪಿ-2020 ಆರ್ಥಿಕ ಸಹಾಯ, (2) ಪಿ-2022 ಆರೋಗ್ಯ, (3) ಪಿ-2023 ಶಿಕ್ಷಣ, ಕ್ರೀಡೆ ಹಾಗೂ ಕೌಶಲ್ಯಾಭಿವೃದ್ಧಿ, ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳು, (4) ಪಿ-0224 ಪಾಲಿಕೆಯ ಗ್ರೂಪ್ 'ಡಿ' ನೌಕರರ/ಗ್ಯಾಂಗ್ ಮನ್ ಮತ್ತು ತೋಟಗಾರಿಕೆ ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿ ವೇತನ ಮತ್ತು ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ ಮತ್ತು (5) ಪಿ-3313 ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ (ಅ) ಪಾಲಿಕೆಯ ಖಾಯಂ ಪೌರಕಾರ್ಮಿಕರ, (ಆ) ಗುತ್ತಿಗೆ ಪೌರಕಾರ್ಮಿಕರ (ಇ) ಸಫಾಯಿ ಕರ್ಮಚಾರಿಗಳ ಮತ್ತು (ಈ) ಮ್ಯಾನ್ಯೂಯಲ್ ಸ್ಕ್ಯಾವೆಂಜರ್ಸ್ ರವರ ಮಕ್ಕಳಿಗೆ ವಿದ್ಯಾರ್ಥಿ ವೇತನ ಮತ್ತು ಉನ್ನತ ವ್ಯಾಸಂಗಕ್ಕಾಗಿ ಧನ ಸಹಾಯ ಹಾಗೂ ಎಲ್ಲಾ ವ್ಯಕ್ತಿಗತ ಕಾರ್ಯಕ್ರಮಗಳ ಸೌಲಭ್ಯ ನೀಡುವ ಕಾರ್ಯಕ್ರಮಗಳಿಗೆ ಲಭ್ಯವಿರುವ ಅನುದಾನವನ್ನು ವಾರ್ಡ್‌ವಾರು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವರ್ಗದವರ ಜನಸಂಖ್ಯೆಯ ಆಧಾರದ ಮೇಲೆ ಹಂಚಿಕೆ ಮಾಡಲಾಗಿರುವ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

(2) ಪಿ-2023ರ ಅಡಿಯಲ್ಲಿ ನಿಗಧಿಪಡಿಸಿರು ರೂ.1200.00ಲಕ್ಷಗಳ ಅನುದಾನದಲ್ಲಿ ರೂ.200.00 ಲಕ್ಷಗಳನ್ನು ಮಾಹಿತಿ ಶಿಕ್ಷಣ ಮತ್ತು ಸಂವಹನ (IEC) ಕಾರ್ಯಕ್ರಮಕ್ಕೆ ಕೇಂದ್ರ ಕಛೇರಿಯಿಂದ ಕ್ರಮ ವಹಿಸಲು ಮತ್ತು ಉಳಿಕೆ ರೂ.1000.00 ಲಕ್ಷಗಳ ಅನುದಾನವನ್ನು ವಾರ್ಡ್‌ವಾರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನಸಂಖ್ಯೆಯ ಆಧಾರದ ಮೇಲೆ ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ.

4. **ಅ) (1) ಪಿ-1936**-ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳು ವಾರ್ಡ್‌ಗಳಿಗೆ, (2) **ಪಿ-3287** ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಆರ್ಥಿಕ ಸಹಾಯ, (3) **ಪಿ-1938** ವಿಕಲಚೇತನರು ಹಾಗೂ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು, (4) **ಪಿ-3289** ಹಿರಿಯ ನಾಗರಿಕರಿಗೆ ಕಲ್ಯಾಣ ಕಾರ್ಯಕ್ರಮಗಳು, (5) **ಪಿ-3312**-ಪ್ರತಿ ವಾರ್ಡ್‌ಗೆ 50 ಸೈಕಲ್ ನೀಡುವ ಕಾರ್ಯಕ್ರಮ, (6) **ಪಿ-568** ಟೈಲರಿಂಗ್/ ನಿಟ್ಟಿಂಗ್/ ಎಂಬ್ರಾಯಡರಿ/ ಕಾಯರ್ ತರಬೇತಿ ಕೇಂದ್ರಗಳ ಸಿಬ್ಬಂದಿಯ ಗೌರವಧನ, (7) **ಪಿ-3311** ಪ್ರತಿ ವಾರ್ಡ್‌ಗೆ 50 ಹೊಲಿಗೆ ಯಂತ್ರ ನೀಡುವ ಕಾರ್ಯಕ್ರಮ ಮೀಸಲಿರಿಸಿರುವ ಅನುದಾನವನ್ನು ಎಲ್ಲಾ 198 ವಾರ್ಡ್‌ಗಳಿಗೆ ಸಮನಾಗಿ ಹಂಚಿಕೆ ಮಾಡಲು ತೀರ್ಮಾನಿಸಲಾಗಿದ್ದು ವಿವರಗಳನ್ನು ಅನುಬಂಧ-3ರಲ್ಲಿ ಲಗತ್ತಿಸಲಾಗಿದೆ.

ಆ) ಪಿ-1936ರ ಅಡಿಯಲ್ಲಿ ನಿಗಧಿಪಡಿಸಿರು ರೂ.1500.00ಲಕ್ಷಗಳ ಅನುದಾನದಲ್ಲಿ ರೂ.100.00ಲಕ್ಷಗಳನ್ನು ಮಾಹಿತಿ ಶಿಕ್ಷಣ ಮತ್ತು ಸಂವಹನ (IEC) ಕಾರ್ಯಕ್ರಮಕ್ಕೆ ಕೇಂದ್ರ ಕಛೇರಿಯಿಂದ ಕ್ರಮ ವಹಿಸಲು ಮತ್ತು ಉಳಿಕೆ ರೂ.1400.00 ಲಕ್ಷಗಳ ಅನುದಾನವನ್ನು ವಾರ್ಡ್‌ವಾರು ಹಿಂದುಳಿದ ವರ್ಗದ ಅಲ್ಪ ಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗೆ ಎಲ್ಲಾ 198 ವಾರ್ಡ್‌ಗಳಿಗೆ ಸಮನಾಗಿ ಹಂಚಿಕೆ ಮಾಡಲು ತೀರ್ಮಾನಿಸಲಾಯಿತು.

5. 2017-18ನೇ ಸಾಲಿನ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಅಳವಡಿಸಿಕೊಳ್ಳಲು ಅನುಮೋದಿಸಿರುವ ಕಲ್ಯಾಣ ಕಾರ್ಯಕ್ರಮಗಳು/ಯೋಜನೆಗಳ ಪಟ್ಟಿಯನ್ನು ಅನುಬಂಧ-4(1), 4(2), 4(3) ಹಾಗೂ 4(4) 4(5)ರಲ್ಲಿ ಲಗತ್ತಿಸಲಾಗಿದೆ.

6. (1) **ಪಿ-2652**-ಸಮುದಾಯ ಸೌಲಭ್ಯಗಳ ಸಹಾಯದನ, ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನಿಗದಿ ಪಡಿಸಲಾದ ಅನುದಾನ ರೂ.2500.00ಲಕ್ಷಗಳನ್ನು ಈ ಕೆಳಗಿನ ವಾರ್ಡ್‌ಗಳಿಗೆ ಹಂಚಿಕೆ ಮಾಡಿ ಕೂಡಲೇ ಜಾಬ್ ಸಂಖ್ಯೆ ನೀಡಲು ಸಮಿತಿಯು ತೀರ್ಮಾನಿಸಿದೆ.

V. Munda
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾ...

ಕ್ರ ಸಂ	ವಾರ್ಡ್ ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
1	13	200.00
2	137	100.00
3	7	200.00
4	56	200.00
5	4	200.00
6	111	200.00
7	117	200.00
8	80	200.00
9	161	100.00
10	60	900.00
	ಒಟ್ಟು	**2500.00**

6.(2) ಮುಂದುವರೆದು ಮೇಲ್ಕಂಡ 10 ವಾರ್ಡ್‌ಗಳಲ್ಲಿ ಲೆಕ್ಕ ಶೀರ್ಷಿಕೆ **ಪಿ-2652** ಸಮುದಾಯ ಸೌಲಭ್ಯಗಳಿಗೆ ಸಹಾಯಧನ (ಸಮುದಾಯ ಕಾರ್ಯಕ್ರಮಗಳು) ಅನುದಾನದಲ್ಲಿನ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಅಂಗ ಸಂಸ್ಥೆಯಾದ ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ಕೈಗೊಳ್ಳಲು ತೀರ್ಮಾನಿಸಿದೆ.

6.(3) ಮೇಲ್ಕಂಡ ಪಿ-2652-ಸಮುದಾಯ ಸೌಲಭ್ಯಗಳಿಗೆ ಸಹಾಯಧನ ಲೆಕ್ಕ ಶೀರ್ಷಿಕೆಯಡಿಯಲ್ಲಿ ವಾರ್ಡ್‌ಗಳಿಗೆ ನಿಗದಿ ಪಡಿಸಲಾದ ಅನುದಾನದಲ್ಲಿ ಕೈಗೊಳ್ಳಬೇಕಾದ ವಾರ್ಡ್‌ವಾರು ಅನುಮೋದಿತ ಕಾಮಗಾರಿಗಳ ಪಟ್ಟಿಯನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

7. (1) ಲೆಕ್ಕ ಶೀರ್ಷಿಕೆ ಪಿ-1878-ಮೂಲಭೂತ ಸೌಕರ್ಯಗಳ / ಸಮುದಾಯ ಸೌಲಭ್ಯಗಳ ಕಾಮಗಾರಿ ಕಾರ್ಯಕ್ರಮಗಳಿಗೆ ಸಂಬಂಧಿಸಿದ ರೂ.15000.00 ಲಕ್ಷಗಳ ಅನುದಾನವನ್ನು ಮೀಸಲಿರಿಸಿದ್ದು, ಸದರಿ ಅನುದಾನವನ್ನು ಈ ಕೆಳಗಿನ ವಾರ್ಡ್‌ಗಳಿಗೆ ಹಂಚಿಕೆ ಮಾಡಿದ್ದು ಅದರಂತೆ ಕೊಡಲೇ ಜಾಬ್ ಸಂಖ್ಯೆ ನೀಡಲು ಸಮಿತಿಯು ತೀರ್ಮಾನಿಸಿದೆ.

ಕ್ರ ಸಂ	ವಾರ್ಡ್ ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)	ಕ್ರ ಸಂ	ವಾರ್ಡ್ ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
1	194	300.00	32	3	400.00
2	13	200.00	33	5	100.00
3	137	150.00	34	6	300.00
4	120	200.00	35	9	100.00
5	96	200.00	36	10	100.00
6	196	400.00	37	197	150.00
7	59	100.00	38	187	100.00
8	112	150.00	39	198	150.00
9	21	150.00	40	149	100.00
10	43	400.00	41	1	200.00
11	7	100.00	42	180	100.00
12	106	100.00	43	15	100.00
13	78	100.00	44	84	150.00
14	61	200.00	45	182	100.00
15	62	100.00	46	131	150.00
16	31	100.00	47	14	700.00
17	48	100.00	48	45	700.00
18	95	100.00	49	42	600.00

V. Sfmela'
ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

19	77	200.00	50	11	600.00
20	67	300.00	51	23	400.00
21	71	300.00	52	192	700.00
22	49	100.00	53	123	500.00
23	140	100.00	54	161	200.00
24	4	200.00	55	97	400.00
25	25	200.00	56	60	2150.00
26	53	200.00	57	27	100.00
27	22	50.00	58	28	100.00
28	70	100.00	59	30	100.00
29	64	50.00	60	24	100.00
30	195	100.00	61	165	50.00
31	12	200.00	62	128	50.00

7(2) ಮುಂದುವರೆದು ಈ ಮೇಲ್ಕಂಡ ವಾರ್ಡ್‌ಗಳಲ್ಲಿ ಲೆಕ್ಕ ಶೀರ್ಷಿಕೆ ಪಿ-1878 ಮೂಲಭೂತ ಸೌಕರ್ಯಗಳು (ಸಮುದಾಯ ಕಾರ್ಯಕ್ರಮಗಳು)ಅನುದಾನದಡಿಯಲ್ಲಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾದ ಹಿನ್ನೆಲೆಯಲ್ಲಿ ಸರ್ಕಾರದ ಅಂಗ ಸಂಸ್ಥೆಯಾದ **ಮೇ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ** ಮುಖಾಂತರ ಕಾಮಗಾರಿಗಳನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು.

7(3) ಲೆಕ್ಕ ಶೀರ್ಷಿಕೆ ಪಿ-1878 ಅನುದಾನದ ಯೋಜನೆಯಡಿಯಲ್ಲಿ ವಾರ್ಡ್‌ವಾರು ಅನುಮೋದಿಸಲಾದ ಕಾಮಗಾರಿಗಳ ಪಟ್ಟಿಯನ್ನು ಅನುಬಂಧ-6 ರಲ್ಲಿ ಲಗತ್ತಿಸಿದೆ.

8. **ಅ)** ಲೆಕ್ಕ ಶೀರ್ಷಿಕೆ ಪಿ-2021 (ವಸತಿ ಸೌಲಭ್ಯಗಳು) ವ್ಯಕ್ತಿಗತ ಸೌಲಭ್ಯಗಳ ಅಡಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ರವರಿಗೆ ಮನೆಗಳ ನಿರ್ಮಾಣಕ್ಕಾಗಿ **(ಆ)** ಲೆಕ್ಕ ಶೀರ್ಷಿಕೆ ಪಿ-2340 ಹಿಂದೂಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ ಮನೆಗಳ ನಿರ್ಮಾಣಕ್ಕಾಗಿ **(ಇ)** ಪಿ-3286-ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಒಂಟಿ ಮನೆ ನಿರ್ಮಾಣಕ್ಕಾಗಿ ಮತ್ತು **(ಈ)** ಪಿ-3314 ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ಆರ್ಥಿಕವಾಗಿ ಹಿಂದೂಳಿದ ವರ್ಗದವರಿಗೆ ವೈಯಕ್ತಿಕ ಮನೆ ನಿರ್ಮಾಣಕ್ಕಾಗಿ ಪ್ರತಿ ಮನೆಗೆ ರೂ.4.00 ಲಕ್ಷಗಳಂತೆ ಸಹಾಯಧನವನ್ನು ನಿಗಧಿಪಡಿಸಲಾಗಿದೆ.

9. (1) ವಸತಿ ಸೌಲಭ್ಯಗಳ ಲೆಕ್ಕ ಶೀರ್ಷಿಕೆ (ಅ) ಪಿ-2021(ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಮನೆ ನಿರ್ಮಾಣ), (ಆ) ಪಿ-2340-ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ ಮನೆಗಳ ನಿರ್ಮಾಣ (ಇ) ಪಿ-3286-ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಒಂಟಿ ಮನೆ ನಿರ್ಮಾಣ ಪ್ರತಿ ಮನೆಗೆ ರೂ.4.00 ಲಕ್ಷಗಳ ಸಹಾಯಧನಕ್ಕೆ ಸಂಬಂಧಪಟ್ಟ ವಸತಿ ಕಾಮಗಾರಿ ಯೋಜನೆಗಳಿಗೆ ಕಾಮಗಾರಿ ಶಾಖೆಯಿಂದ ವಲಯ ಮುಖ್ಯ ಅಭಿಯಂತರರು, ಪ್ರಧಾನ ಅಭಿಯಂತರರು ಮತ್ತು ವಿಷೇಶ ಆಯುಕ್ತರು (ಯೋಜನೆ)ರವರ ಮುಖಾಂತರ ವರ್ಗವಾರು ಪ್ರಸ್ತವನೆಗಳನ್ನು ಒಳಗೊಂಡ ವಾರ್ಡ್ / ಉಪ ವಿಭಾಗ / ವಿಭಾಗಿಯ / ವಲಯವಾರು ಕಾಮಗಾರಿ ಕ್ರಿಯ ಯೋಜನೆಯನ್ನು ಸಿದ್ದಪಡಿಸಿ ಸಮುಚ್ಚಯ ಮಾರ್ಗದಲ್ಲಿ ನಿಯಮಾನುಸಾರ ಮಾರ್ಗಸೂಚಿಗಳನ್ವಯ ಎಲ್ಲಾ ರೀತಿಯ ಕ್ರಮ ಕೈಗೊಂಡು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

9. (2) ಪಿ-3314 ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದಲ್ಲಿ ಆರ್ಥಿಕವಾಗಿ ಹಿಂದೂಳಿದ ವರ್ಗದವರಿಗೆ ವೈಯಕ್ತಿಕ ಮನೆ ನಿರ್ಮಾಣಕ್ಕಾಗಿ ಪ್ರತಿ ಮನೆಗೆ ರೂ.4.00 ಲಕ್ಷಗಳಂತೆ ಸಹಾಯಧನವನ್ನು ಆಯವ್ಯಯ ಪುಸ್ತಕದಲ್ಲಿ ನಿಗಧಿಪಡಿಸಲಾಗಿರುವಂತೆ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗಿದೆ.

10. ಪಿ-3288 ಟೈಲರಿಂಗ್, ನಿಟ್ಟಿಂಗ್ ಮತ್ತು ಎಂಬ್ರಾಯಿಡರಿ ಕೇಂದ್ರಗಳಿಗೆ ಹೊಸದಾಗಿ ಕಟ್ಟಡಗಳ ನಿರ್ಮಾಣಕ್ಕೆ ನಿಗಧಿ ಪಡಿಸಿರುವ ಅನುದಾನಕ್ಕೆ ಸಂಬಂಧಪಟ್ಟ ಕಾಮಗಾರಿ ಯೋಜನೆಗಳಿಗೆ ಕಾಮಗಾರಿ ಶಾಖೆಯಿಂದ ವಲಯ ಮುಖ್ಯ ಅಭಿಯಂತರರು, ಪ್ರಧಾನ ಅಭಿಯಂತರರು ಮತ್ತು ವಿಷೇಶ ಆಯುಕ್ತರು (ಯೋಜನೆ)ರವರ

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮುಖಾಂತರ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಸಮುಚ್ಚೆಯ ಮಾರ್ಗದಲ್ಲಿ ನಿಯಮಾನುಸಾರ ಮಾರ್ಗಸೂಚಿಗಳನ್ವಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವುದು.

11. ಒಂದುವೇಳೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಿಂದ ಅನುದಾನ ಹಂಚಿಕೆ ಮಾಡಲಾದ ಯಾವುದೇ ವಾರ್ಡ್ ವ್ಯಾಪ್ತಿಯಲ್ಲಿ ಫಲಾನುಭವಿಗಳು ಲಭ್ಯವಿಲ್ಲದಿದ್ದಲ್ಲಿ ಆಯಾ ವಾರ್ಡ್‌ಗಳ ಉಳಿಕೆ ಅನುದಾನವನ್ನು ಸದ್ಬಳಕೆ ಮಾಡುವ ಹಿತದೃಷ್ಟಿಯಿಂದ ಬೇಡಿಕೆ ಇರುವಂತಹ ಇತರೆ ವಾರ್ಡ್‌ಗಳಿಗೆ ಸಮುಚ್ಚಿತಮಾರ್ಗದಲ್ಲಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಅನುದಾನ ಮರುಹೊಂದಾಣಿಕೆ ಮಾಡಿಕೊಳ್ಳಲು ಸಮಿತಿಯು ತೀರ್ಮಾನಿಸಿತು.

12. ಪಾಲಿಕೆಯ ಸಾರಥಿ ಯೋಜನೆಯಡಿಯಲ್ಲಿ ವಿವಿಧ ವರ್ಗದ ಫಲಾನುಭವಿಗಳಿಗೆ ಪ್ರಯಾಣಿಕರ/ಸರಕು ಸಾಗಾಣಿಕೆ ಆಟೋ ರಿಕ್ಷಾಗಳನ್ನು ಕೊಳ್ಳಲು ಸಹಾಯಧನ ಯೋಜನೆಯಡಿಯಲ್ಲಿ ಸಹಾಯಧನವನ್ನು ಗರಿಷ್ಠ ರೂ.60,000/-ಗಳಿಗೆ ಪರಿಷ್ಕರಿಸಿ ತೀರ್ಮಾನಿಸಲಾಯಿತು.

13. ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆಯಡಿಯಲ್ಲಿ ಪ್ರಯಾಣಿಕರ ಕಾರು/ಸರಕು ಸಾಗಾಣಿಕೆ ವಾಹನ ಕೊಳ್ಳಲು ಸಹಾಯಧನ ಯೋಜನೆಯಡಿಯಲ್ಲಿ ಸಹಾಯಧನವನ್ನು ಗರಿಷ್ಠ on Road Price ರೂ.10,00,000/-ಗಳ ಬೆಲೆಯ ವಾಹನವನ್ನು ಕೊಳ್ಳಲು ಪ್ರತಿ ಫಲಾನುಭವಿಗೆ ಸಹಾಯಧನವನ್ನು ಗರಿಷ್ಠ ರೂ.1,50,000/- ಗಳಿಗೆ ಪರಿಷ್ಕರಿಸಿ ತೀರ್ಮಾನಿಸಲಾಯಿತು.

14. 8ನೇ ತರಗತಿಯಿಂದ 12ನೇ ತರಗತಿ (2ನೇ ಪಿ.ಯು.ಸಿ) ವರೆಗಿನ ವಿದ್ಯಾರ್ಥಿಗಳಿಗೆ ಲಭ್ಯ ಅನುದಾನಕ್ಕೆ ಅನುಸಾರವಾಗಿ ಬೈಸಿಕಲ್ ವಿತರಿಸುವ ಯೋಜನೆಯನ್ನು ಹೊಸದಾಗಿ ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು (ಬಿಬಿಎಂಪಿ ಶಾಲೆಯ ವಿದ್ಯಾರ್ಥಿಗಳಿಗೆ ಅಧ್ಯತೆ ನೀಡುವುದು).

15. ವಿವಿಧ ಲೆಕ್ಕ ಶೀರ್ಷಿಕೆಗಳಡಿ ನಿಗಧಿಪಡಿಸಿರುವ ಅನುಧಾನವನ್ನು ಅದೇ ಉದ್ದೇಶಗಳಿಗೆ ವೆಚ್ಚಮಾಡತಕ್ಕದ್ದು, ಒಂದು ವೇಳೆ ಅನುಧಾನದ ಮರುಹೊಂದಾಣಿಕೆ ಮಾಡಿಕೊಳ್ಳಬೇಕಾದ್ದಲ್ಲಿ, ಒಂದೇ ಲೆಕ್ಕಶಿರ್ಷಿಕೆಯಡಿಯಲ್ಲಿ ಬರುವಂತಹ ವಿವಿಧ ಕಾರ್ಯಕ್ರಮಗಳ ಪೈಕಿ, ಯಾವುದಾದರು ಕಾರ್ಯಕ್ರಮಕ್ಕೆ ಮೀಸಲಿಟ್ಟಿರುವ ಅನುದಾನ ಬಳಕೆಯಾಗದೆ ಉಳಿಕೆಯಾದ ಪಕ್ಷದಲ್ಲಿ, ಅಂತಹ ಅನುದಾನವನ್ನು ಸದರಿ ಲೆಕ್ಕಶೀರ್ಷಿಕೆಯಡಿ ಬರುವಂತಹ ಯಾವುದಾದರೂ ಹೆಚ್ಚು ಬೇಡಿಕೆಯಿರುವ ಕಾರ್ಯಕ್ರಮಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳವ ಪ್ರಸ್ತಾವನೆಗೆ ವಲಯ ಅಪರ/ಜಂಟಿ ಆಯುಕ್ತರವರು ಅನುಮೋದನೆ ನೀಡಲು ಅಧಿಕಾರ ಪ್ರತ್ಯಾಯೋಜನೆ ನೀಡಲು ತೀರ್ಮಾನಿಸಲಾಯಿತು.

16. ಪದವಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಾತ್ರ ಗರಿಷ್ಟ ರೂ. 50,000 ಮೌಲ್ಯದ ಡೆಸ್ಕ್‌ಟಾಪ್ ಕಂಪ್ಯೂಟರ್/ ಲ್ಯಾಪ್‌ಟಾಪ್ ವಿತರಿಸಲು ತೀರ್ಮಾನಿಸಲಾಯಿತು.

17. ಚರ್ಮಕಾರ್ಮಿಕರಿಗೆ ವಿಶೇಷ ವಿನ್ಯಾಸದ ಚರ್ಮ ಕುಟೀರ (Kiosk) ವಿತರಿಸುವ ಕಾರ್ಯಕ್ರಮ/ ಯೋಜನೆಯನ್ನು ಅಳವಡಿಸಿಕೊಂಡು ಅನುಷ್ಟಾನಗೊಳಿಸಲು ನಿರ್ಣಯಿಸಲಾಯಿತು.

18. ಪಿ-1938 ವಿಕಲ ಚೇತನರಿಗೆ ಮೀಸಲಿಟ್ಟ ಅನುದಾನದಲ್ಲಿ ಸ್ಥಾಯಿ ಸಮಿತಿಯಿಂದ ತೀರ್ಮಾನಿಸಲಾದ ಫಲಾನುಭವಿಗಳಿಗೆ ಕಾಮಗಾರಿ ಯೋಜನೆಗಳು ಅಂದರೆ ವಸತಿ ನಿರ್ಮಾಣ - ಪಕ್ಕಾಮನೆ ನಿರ್ಮಾಣ, ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ, ಯು.ಜಿ.ಡಿ ಸಂಪರ್ಕ ಹಾಗೂ ನೀರಿನ ಸಂಪರ್ಕ ವೆಚ್ಚ ಭರಿಸುವುದು, ಅಡುಗೆ ಅನಿಲ ಸಂಪರ್ಕ ಮತ್ತು ಮೂಲ ಸೌಕರ್ಯಗಳು - ಎಲ್ಲಾ ಸರ್ಕಾರಿ ಕಛೇರಿಗಳು, ಸಮುದಾಯ ಭವನಗಳು ಮುಂತಾದ ಸಾರ್ವಜನಿಕ ಕಟ್ಟಡಗಳಲ್ಲಿ ಜಾರು ಹಾದಿ ಹಾಗೂ ವಿಕಲಚೇತನ ಸ್ನೇಹಿ ಶೌಚಾಲಯಗಳನ್ನು ನಿರ್ಮಿಸಲು ಧನ ಸಹಾಯ ಪ್ರಸ್ಥಾವನೆ/ಯೋಜನೆಗಳಿಗೆ ಸಂಬಂಧಿಸಿದಂತೆ ಕಾಮಗಾರಿ ಸಂಕೇತ ನೀಡಲು ಮತ್ತು ವಿವಿದ ಕಲ್ಯಾಣ ಕಾರ್ಯಕ್ರಮಗಳಿಗೆ ಡಿಸಿ ಬಿಲ್ ಮುಖಾಂತರ ಪಾವತಿಸಲು ತೀರ್ಮಾನಿಸಲಾಯಿತು.

V. Umesh 10

ಅಧ್ಯಕ್ಷರು
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇಲ್ಕಂಡ ಮಾರ್ಪಾಡುಗಳೊಂದಿಗೆ, ಅಪರ ಆಯುಕ್ತರು(ಕಲ್ಯಾಣ)ರವರ ಪ್ರಸ್ತಾವನೆಯಲ್ಲಿ ವಿವರಿಸಿರುವ ಉಳಿದೆಲ್ಲಾ ಅಂಶಗಳನ್ನು ಯಥಾವತ್ತಾಗಿ ಅನುಮೋದಿಸಲು ಸಮಿತಿಯು ತೀರ್ಮಾನಿಸಿತು.

V. Elumalai
(ಅಧ್ಯಕ್ಷರು)
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕ್ರ.ಸಂ	ಹೆಸರು	ಪದನಾಮ	ಸಹಿ
1.	ಶ್ರೀ ವಿ. ಏಳುಮಲೈ	ಅಧ್ಯಕ್ಷರು	V. Elumalai
2.	ಶ್ರೀ ವಿ.ವಿ. ಪಾರ್ತಿಬರಾಜನ್	ಸದಸ್ಯರು	
3.	ಶ್ರೀ ಎಂ.ವೇಲು ನಾಯಕರ್	ಸದಸ್ಯರು	
4.	ಶ್ರೀಮತಿ ಇರ್ಷಾದ್ ಬೇಗಂ	ಸದಸ್ಯರು	Irsh Beg
5.	ಶ್ರೀ ಆರ್. ವಸಂತಕುಮಾರ್	ಸದಸ್ಯರು	R. ವಸಂತಕುಮಾರ್
6.	ಶ್ರೀ ಅಂಜನಪ್ಪ ಎಂ	ಸದಸ್ಯರು	
7.	ಶ್ರೀಮತಿ ರಾಜೇಶ್ವರಿ ಚೋಳರಾಜು ಕೆ	ಸದಸ್ಯರು	ರಾಜೇಶ್ವರಿ
8.	ಶ್ರೀಮತಿ ಶ್ರೀಲತಾ ಸಿ.ಜೆ. ಗೋಪಿನಾಥರಾಜು	ಸದಸ್ಯರು	Sri Latha
9.	ಶ್ರೀಮತಿ ಕುಮಾರಿ ಪಳನಿಕಾಂತ್	ಸದಸ್ಯರು	
10.	ಶ್ರೀ ಜಯಪಾಲ್ ಎನ್	ಸದಸ್ಯರು	N Fropal
11.	ಶ್ರೀ ಕೆ. ನರಸಿಂಹನಾಯಕ್	ಸದಸ್ಯರು	K. Narasimha